ಪೂರ್ಣ ಮಾಡುತ್ತೇವೆಂಬ ವಿಶ್ವಾಸ ನಮಗಿದೆ. ಅದಕ್ಕೆ ವ್ಯತಿರಿಕ್ತ ಕೆಲಸವಾಗಿರುವ ಬಗ್ಗೆ ತಮ್ಮ ಹತ್ತಿರ ಮಾಹಿತಿ ಇದ್ದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಭಟ್ಕಳ ಕ್ಷೇತ್ರದಲ್ಲಿ ಹಿಂದುಳಿದ ವರ್ಗದವರಿಗಾಗಿ ವಸತಿನಿಲಯ ಸ್ಥಾಪನೆ

243 (1667)

ಶ್ರೀ ಶಿವಾನಂದ ನಾಯಕ್(ಭಟ್ಕಳ) ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಭಟ್ಕಳ ಕ್ಷೇತ್ರದಲ್ಲಿ ಹಿಂದುಳಿದ ವರ್ಗದವರಿಗಾಗಿ ಎಲ್ಲೆಲ್ಲಿ ವಸತಿ ನಿಲಯಗಳನ್ನು ಸ್ಥಾಪಿಸಲಾಗಿದೆ. (ಬಾಲಕರು ಮತ್ತು ಬಾಲಕಿಯರು ಸೇರಿದಂತೆ)

(ಆ) ಯಾವ ಯಾವ ವಸತಿನಿಲಯಗಳು ಸ್ವಂತ ಕಟ್ಟಡ ಹೊಂದಿವೆ? ಸ್ವಂತ ಕಟ್ಟಡಗಳು ಹಾಗೂ ಬಾಡಿಗೆ ಕಟ್ಟಡಗಳು ಸುಸ್ಥಿತಿಯಲ್ಲಿವೆಯೆ?

(ಇ) ವಸತಿನಿಲಯ ಕಟ್ಟಡಗಳ ರಿಪೇರಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

(ಈ) 1999-2000ನೇ ಸಾಲಿನಲ್ಲಿ ಹೊಸದಾಗಿ ನಿಲಯ ಪ್ರಾರಂಭಿಸಲು ಉದ್ದೇಶಿಸಲಾಗಿರುವ ಸ್ಥಳಗಳಾವುವು?

ಶ್ರೀ. ಮಾಲೀಕಯ್ಯ ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು):

(ಅ) ಭಟ್ಕಳ ಕ್ಷೇತ್ರದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಇಲಾಖೆಯ ವಿದ್ಯಾರ್ಥಿನಿಲಯಗಳಿರುತ್ತವೆ.

1) ಮೆಟ್ರಿಕ್‌ಪೂರ್ವ ಬಾಲಕರ ನಿಲಯ ಭಟ್ಕಳ.
2) ಮೆಟ್ರಿಕ್ ಪೂರ್ವ ಬಾಲಕರ ನಿಲಯ ಮುರ್ಡೇಶ್ವರ.
3) ಮೆಟ್ರಿಕ್ ಪೂರ್ವ ಬಾಲಕರ ನಿಲಯ ಮಂಕಿ
4) ಮೆಟ್ರಿಕ್ ಪೂರ್ವ ಬಾಲಕರ ನಿಲಯ ಇಡಗುಂಜಿ
5) ಮೆಟ್ರಿಕ್ ಪೂರ್ವಬಾಲಕರ ನಿಲಯ ಖಿರ್ವಾ
6) ಮೆಟ್ರಿಕ್ ಪೂರ್ವ ಬಾಲಕರ ನಿಲಯ ಜಲವಳ್ಳಿ
7) ಮೆಟ್ರಿಕ್ ಪೂರ್ವ ಬಾಲಕಿಯರ ನಿಲಯ ಮಂಕಿ

(ಆ) ಈ ಪೈಕಿ ಈ ಕೆಳಕಂಡ ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡದಲ್ಲಿ ನಿರ್ವಹಿಸಲಾಗುತ್ತಿದೆ.

1) ಮೆಟ್ರಿಕ್ ಪೂರ್ವ ಬಾಲಕಿಯರ ನಿಲಯ, ಮಂಕಿ.
2) ಮೆಟ್ರಿಕ್ ಪೂರ್ವ ಬಾಲಕರ ನಿಲಯ ಖಿರ್ವಾ.

ಬಾಡಿಗೆ ಹಾಗೂ ಸ್ವಂತ ಕಟ್ಟಡಗಳು ಸುಸ್ಥಿತಿಯಲ್ಲಿದೆ.

(ಇ) ವಿದ್ಯಾರ್ಥಿನಿಲಯಗಳ ನಿರ್ಮಾಣ ಹಾಗೂ ದುರಸ್ತಿಗಾಗಿ ಉತ್ತರ ಕನ್ನಡ ಜಿಲ್ಲೆಗೆ ಜಿಲ್ಲಾ ಆಯವ್ಯಯದಲ್ಲಿ ರೂ.10.50 ಲಕ್ಷಗಳ ಹಣದ ಅವಕಾಶ ಮಾಡಲಾಗಿರುತ್ತದೆ. ಅವಶ್ಯವಿದ್ದಲ್ಲಿ ಸದರಿ ಮೊತ್ತದಲ್ಲಿ ಸೂಕ್ತ ದುರಸ್ತಿ ಮಾಡಲಾಗುವುದು.

(ಈ) ಸರ್ಕಾರದ ಪರಿಶೀಲನೆಯಲ್ಲಿದ್ದು ಸದ್ಯದಲ್ಲೇ ತೀರ್ಮಾನ ಕೈಗೊಳ್ಳಲಾಗುವುದು.

ಶ್ರೀ ಶಿವಾನಂದ ನಾಯ್ಕ್:- ಸಚಿವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಚಿವರ ದೃಷ್ಟಿಯಲ್ಲಿ ಸೋರುತ್ತಿರುವ ಕಟ್ಟಡಗಳೆಲ್ಲಾ ಸುಸ್ಥಿತಿಯಲ್ಲಿದೆ ಎಂದು ಕಾಣುತ್ತದೆ. ಮೊನ್ನೆ ನಾನು ಮಂಕಿ ಮತ್ತು ಖಿರ್ವಾ, ಮುರ್ಡೇಶ್ವರ ಹಾಸ್ಟೆಲ್‌ಗಳಿಗೆ ಹೋಗಿ ನೋಡಿದ್ದೇನೆ. ಮಳೆ ನೀರು ಬಂದು ಎಲ್ಲಾ

ಸೋರುತ್ತಿದೆ. ಅಂಥ ಕಟ್ಟಡ ಸುಸ್ಥಿತಿಯಲ್ಲಿದೆ ಎನ್ನುತ್ತಾರೆ. ತಮಗೆ ಸರಿಯಾದ ವರದಿ ಸಿಕ್ಕಿಲ್ಲ ಮತ್ತು ತಮ್ಮ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಹಾಗೂ ಈಗಾಗಲೇ ಮಂಜೂರಾಗಿರುವ ಭಟ್ಕಳ ,ಇಡಗುಂಜಿ ಹಾಸ್ಟೆಲ್‌ಗಳನ್ನು ಗುತ್ತಿಗೆಗೆ ತೆಗೆದುಕೊಂಡು 3 ವರ್ಷಗಳಾಗಿ ಕೆಲಸ ನಡೆಯುತ್ತಿದೆ. ಇಲ್ಲಿವರೆಗೆ ಪೂರ್ಣ ಮಾಡಿಲ್ಲ. ಅದನ್ನು ಯಾವಾಗ ಪೂರ್ಣಗೊಳಿಸುತ್ತೀರಿ? ಉಳಿದ ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡವನ್ನು ಯಾವಾಗ ಒದಗಿಸುತ್ತೀರಿ? ಈಗಾಗಲೇ ಜಿಲ್ಲಾ ಪಂಚಾಯತ್‌ನಲ್ಲಿ ತಾವು ಹತ್ತೂವರೆ ಲಕ್ಷ ರೂಪಾಯಿ ಇದೆ ಎಂದು ಹೇಳಿದ್ದೀರಿ. ಅದನ್ನು ಅವಶ್ಯಕತೆ ಬಿದ್ದರೆ ಖರ್ಚು ಮಾಡುತ್ತೇವೆನ್ನುತ್ತೀರಿ. ಈ ರೀತಿ ಸೋರುತ್ತಿರುವ ಕಟ್ಟಡಕ್ಕೆ ಅವಶ್ಯಕತೆ ಇಲ್ಲವೇ? ಅದನ್ನು ಯಾವಾಗ ನೀವು ಸರಿಪಡಿಸುತ್ತೀರಾ ಎಂಬ ಬಗ್ಗೆ ಸ್ಪಷ್ಟ ಉತ್ತರವನ್ನು ನೀಡಬೇಕು.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್:- ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಈಗಾಗಲೇ ಉತ್ತರ ನೀಡಿದ್ದೇನೆ. ಈಗ ಅಲ್ಲಿ ಕಟ್ಟಡಗಳು ಸೋರುತ್ತಿವೆ ಎಂಬ ಮಾಹಿತಿ ನೀಡಿದ್ದಾರೆ, ಕಾರವಾರ ಜಿಲ್ಲೆಯಲ್ಲಿ ಈಗಾಗಲೇ ನಾನು 10ಲಕ್ಷ 50 ಸಾವಿರ ರೂಪಾಯಿಗಳನ್ನು ನಿಗದಿಪಡಿಸಿದ್ದೇನೆ. ಆ ಕೆಲಸ ತೆಗೆದುಕೊಳ್ಳಲು ಹೇಳುತ್ತೇನೆ. ಜೊತೆಗೆ 5 ಬಾಡಿಗೆ ಕಟ್ಟಡಗಳ ಕೆಲಸವನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದು, ನಿಮ್ಮ ಗಮನಕ್ಕೆ ತರಬೇಕಾದರೆ, ನಮ್ಮ ಸರ್ಕಾರ ಬಂದ ನಂತರ ಸುಮಾರು 1291 ಹಾಸ್ಟೆಲ್‌ಗಳು ಏನು ನಡೆಯುತ್ತಿವೆ ಅದರಲ್ಲಿ ಸುಮಾರು 562 ಹಾಸ್ಟೆಲ್‌ಗಳಲ್ಲಿ ಕಟ್ಟಡ ಕಟ್ಟಿ ಪೂರ್ಣ ಮಾಡಿದ್ದು, 533ರಲ್ಲಿ 233 ಹಾಸ್ಟೆಲ್‌ಗಳನ್ನು ಕಟ್ಟಿ ಪೂರ್ಣಮಾಡಿ ಉದ್ಘಾಟನೆ ಮಾಡಿದ್ದೇವೆ. ಇನ್ನೂ 78 ಕಟ್ಟಡಗಳು ಕಾಮಗಾರಿಯ ಹಂತದಲ್ಲಿವೆ. ಅದರಲ್ಲಿ ಕೂಡ ಅದೂ ಒಂದು ಸೇರಿದೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಅದನ್ನು ಈ ವರ್ಷವೇ ಮುಗಿಸಲು ಎಲ್ಲಾ ಹಣಕಾಸಿನ ವ್ಯವಸ್ಥೆ ಮಾಡುತ್ತಿದ್ದೇನೆ. ಇನ್ನುಳಿದ ಹಾಸ್ಟೆಲ್‌ಗಳಿಗೆ ಕೂಡ ಆಯವ್ಯಯದಲ್ಲಿ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುವುದು ಎಂಬುದನ್ನು ಪರಿಶೀಲಿಸಿ ನಿಮ್ಮ ಸಮಸ್ಯೆಗೆ ಸ್ಪಂದಿಸಿ ಕೆಲಸ ಮಾಡುತ್ತೇನೆ.

11.40 ಎ.ಎಂ.

ಶ್ರೀ ಶಿವಾನಂದ ನಾಯಕ್: ಭಟ್ಕಳದಲ್ಲಿ ಕಟ್ಟಡ ಮುಗಿಯುವ ಹಂತದಲ್ಲಿದೆ, ಕುಡಿಯುವ ನೀರಿನ ಯೋಜನೆ, ವಿದ್ಯುತ್ ಸರಬರಾಜು ಕೆಲಸ ಆಗಲಿಲ್ಲ, ಈ ಕೆಲಸವನ್ನು ತಕ್ಷಣ ಮಾಡಬೇಕು, ಏಕೆಂದರೆ, ಈಗಾಗಲೇ ನಾವು ವಿದ್ಯಾರ್ಥಿಗಳನ್ನು ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗಿದೆ. ಒಂದೆರಡು ತಿಂಗಳಲ್ಲಿ ಹಾಸ್ಟೆಲ್ ಸರಿಮಾಡಿಸಿಕೊಟ್ಟರೆ ಹುಡುಗರನ್ನು ಭರ್ತಿಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ : ಆದಷ್ಟು ಬೇಗ ಗಮನ ಹರಿಸುತ್ತೇನೆ.
ಮಂಗಳೂರು ಕೋಡಿಯಾಲ ಬಯಲಿನಲ್ಲಿರುವ ಅಂಬೇಡ್ಕರ್ ಭವನ ನಿರ್ಮಾಣ
244 (1684)

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

(ಅ) ಮಂಗಳೂರಿನ ಉಳಾರ ಮಾರ್ಕೆಟ್ ವೇಲ್ಸ್ ಪೇಟೆಯ ಬಳಿ ಇರುವ ಪರಿಶಿಷ್ಟ ವಿದ್ಯಾರ್ಥಿಗಳಿರುವ ವಿದ್ಯಾರ್ಥಿನಿಲಯ ನಿರ್ಮಾಣಕಾರ್ಯ ಯಾವ ಹಂತದಲ್ಲಿದೆ, ಹಾಗೂ ಅದನ್ನು ಯಾವಾಗ ಪೂರ್ಣಗೊಳಿಸಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚ ಎಷ್ಟು?